'ಯಾವಾಗಲೂ ಮಲಗೇ ಇರ್ತಾನೆ. ತಿಂಡಿ, ಊಟ, ಕಾಫಿ ಎಲ್ಲ ರೂಮಿಗೇ ಹೋಗ್ಬೇಕು. ಕೆಲಸ ಮುಗಿದ ಮೇಲೂ ಆಚೆ ಬರಲ್ಲ. ಲ್ಯಾಪ್‌ಟಾಪ್, ಮೊಬೈಲ್, ಗೇಮ್ ಅಂತ ಹಾಸಿಗೆ ಮೇಲೇ ಕೂತಿರ್ತಾನೆ. ಯಾವಾಗ ಎದ್ದಿರ್ತಾನೆ ಅನ್ನೋದೇ ಗೊತ್ತಾಗಲ್ಲ. ಎಷ್ಟು ಹೇಳಿದರೂ ಕೇಳಲ್ಲ, ಹೀಗೇ ಮುಂದುವರೆದರೆ ಇವನ ಕಥೆ ಏನು...'

'ಸೆಪರೇಟ್ ರೂಂ ಮಾಡಿಕೊಟ್ಟಿದ್ದೇ ತಪ್ಪಾಯಿತು. ಮನೆಮಂದಿಯೊಂದಿಗೆ ಮಾತಿಲ್ಲ, ಕಥೆಯಿಲ್ಲ. ಯಾರೊಂದಿಗೂ ಉಭ–ಶುಭ ಇಲ್ಲ. ಆಡಲಿಕ್ಕೋ ಹರಟಲಿಕ್ಕೋ ಹೊರಗೆ ಹೋಗುವುದೂ ಇಲ್ಲ. ಊಟ ತಿಂಡಿಗೆ ಬರಲಿಕ್ಕೂ ನಾಲ್ಕೈದು ಸಲ ಗಂಟಲು ಹರಿದುಕೊಳ್ಳಬೇಕು. ಕೊಳೆತ ಆಲೂಗೆಡ್ಡೆಯಂತೆ ದಿನದ ಮೂರೂ ಹೊತ್ತು ಕೋಣೆಯೊಳಗೇ ಇರುತ್ತಾಳೆ. ಹೀಗಾದರೆ, ಮುಂದೆ ಇವಳ ಕಥೆಯೇನು? ಹೋದ ಮನೆಯಲ್ಲಿ ಹೇಗೆ ಸಂಸಾರ ಮಾಡ್ತಾಳೆ...'

ಆಪ್ತ ಸಮಾಲೋಚಕರ ಮುಂದೆ ಇದೇ ರೀತಿಯ ದೂರು ಹೊತ್ತು ಆತಂಕದಿಂದ ಬರುವ ಪೋಷಕರ ಸಂಖ್ಯೆ ಈಚೆಗೆ ಗಮನಾರ್ಹ ಮಟ್ಟದಲ್ಲಿ ಏರಿಕೆಯಾಗಿದೆ.

ಎಳೆಯರಷ್ಟೇ ಅಲ್ಲ; ತರುಣ ತರುಣಿಯರೂ ಹಾಸಿಗೆಯ ಮೇಲೆ ಹೆಚ್ಚು ಸಮಯ ಕಳೆಯುತ್ತಿದ್ದಾರೆ. ಮಲಗಿಕೊಂಡು ಟೀವಿ ನೋಡುತ್ತಿದ್ದಾರೆ. ಮೊಬೈಲ್ ಫೋನ್‌ಗಳಲ್ಲಿ ಸಖಸಖಿಯರೊಂದಿಗೆ ಹರಟುತ್ತಿದ್ದಾರೆ. ಓದುವುದಕ್ಕೂ ಉಣ್ಣುವುದಕ್ಕೂ ಹಾಸಿಗೆಯೇ ಬಳಕೆಯಾಗುತ್ತಿದೆ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎನ್ನುವ ಗಾದೆಯೀಗ ಹಳತಾಗಿರುವುದಷ್ಟೇ ಅಲ್ಲ, ಹೊಸ ತಲೆಮಾರಿಗೆ ಅರ್ಥಹೀನವಾಗಿಯೂ ಕಾಣಿಸುತ್ತಿದೆ. ಈಗ ಕಾಲು ಚಾಚುವುದಕ್ಕೆ ಮಾತ್ರ ಹಾಸಿಗೆ ಬಳಕೆಯಾಗುತ್ತಿಲ್ಲ. ಅದೊಂದು ರೀತಿಯಲ್ಲಿ ಮನೆಯೇ ಆಗಿಬಿಟ್ಟಿದೆ. ನಮ್ಮ ಕಾಲಿನ ಉದ್ದವನ್ನು ಮೀರಿ, ಅಗತ್ಯಗಳಿಗೆ ತಕ್ಕಂತೆ ಹಾಸಿಗೆಯ ಸ್ವರೂಪ ಮತ್ತು ಗಾತ್ರ ಬದಲಾಗುತ್ತಿದೆ. ಕೆಲವರಂತೂ ಕಚೇರಿಯನ್ನು ಹಾಸಿಗೆಯ ಮೇಲೂ ರೂಪಿಸಿಕೊಂಡಿದ್ದಾರೆ. ವರ್ಕ್ ಫ್ರಂ ಹೋಂ ಎನ್ನುವುದು, 'ವರ್ಕ್ ಆನ್ ಬೆಡ್' ಎಂದಾಗಿದೆ. ಈ ಎಲ್ಲ ಬದಲಾವಣೆಗಳನ್ನು ನೋಡಿ, ಈ 'ಬೆಡ್ ರಾಟಿಂಗ್' ಮಂದಿ ಎಷ್ಟು ಪುಣ್ಯವಂತರು ಎಂದು ಹೇಳುವಂತಿಲ್ಲ. ಬೆಳಕಿನ ಬೆನ್ನಿಗೆ ಕತ್ತಲೂ ಇರುತ್ತದಷ್ಟೇ.

ಅಭ್ಯಾಸಗಳನ್ನು ಗುರ್ತಿಸಲು ಹಾಗೂ ಅದರ ಬಗ್ಗೆ ಅಧ್ಯಯನ ನಡೆಸಲು, ಸುಂದರ ಹೆಸರೊಂದನ್ನು ಠಂಕಿಸುವುದು ಅಭ್ಯಾಸವಷ್ಟೇ. ಆ ಅಭ್ಯಾಸದಂತೆ, ಹಾಸಿಗೆಗೆ ಅಂಟಿಕೊಂಡಿರುವ ಜಾಣ ಜಾಣೆಯರ ಅಭ್ಯಾಸಕ್ಕೂ ನಾಮಕರಣ ಮಾಡಲಾಗಿದೆ. ಅದುವೇ 'ಬೆಡ್ ರಾಟಿಂಗ್'.

ಬಿಟ್ಟೇವೆಂದರೂ ಬಿಡದ ಹಾಸಿಗೆಯ ಅತಿ ಸಖ್ಯದ ಕುರಿತು ದೂರುಗಳಿಗೇನೂ ಕಡಿಮೆಯಿಲ್ಲ. ಆ ದೂರುದುಮ್ಮಾನಗಳಿಗೆ ಮೊದಲು, ಸಾಮಾಜಿಕ ಜಾಲತಾಣಗಳಲ್ಲಿ ಟ್ರೆಂಡ್ ಆಗಿರುವ, ಹಳತಾಗುತ್ತಿರುವ 'ಬೆಡ್ ರಾಟಿಂಗ್' ಪರಿಕಲ್ಪನೆಯ ಒಳಹೊರಗಿನ ಬಗ್ಗೆ ತಿಳಿಯುವುದು ಅವಶ್ಯಕ.

## ಕೂತು, ಮಲಗಿ ಕೊಳೆಯುವುದು...

ಕನ್ನಡದಲ್ಲಿ 'ಬೆಡ್ ರಾಟಿಂಗ್' ಪದದ ಅಕ್ಷರಶಃ ಅರ್ಥ, 'ಹಾಸಿಗೆಯಲ್ಲೇ ಕೊಳೆಯುವುದು'. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಈ ಪದಕ್ಕೆ ಹಲವು ಅರ್ಥ, ವ್ಯಾಖ್ಯಾನಗಳೇ ಸೃಷ್ಟಿಯಾಗಿವೆ. ಈಚೆಗೆ



